ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/06/2016-17. ದಿನಾಂಕ 20-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎನ್.ಚಿದಾನಂದಪ್ಪ ತಂದೆ ಲೇಟ್ ಚನ್ನಮಲ್ಲಪ್ಪ<br>2)ನಿಡುಗುರ್ತಿ ಸಿದ್ದಲಿಂಗಪ್ಪ ತಂದೆ ಲೇಟ್ ಶ[illegible]<br>3)ಈರಮ್ಮ ಗಂಡ ಲೇಟ್ ರೇವಪ್ಪ<br>ಭೀಮಸಮುದ್ರ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಗುಡೇಕೋಟೆ |
| ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 70ಎ. 71ಬಿ. 71ಡಿ. ವಿಸ್ತೀರ್ಣ 0-98. 0-72. 0-89. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 70ಎ. 71ಬಿ. 71ಡಿ. ವಿಸ್ತೀರ್ಣ 0-98. 0-72. 0-89. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಭೀಮಸಮುದ್ರ ಗ್ರಾಮದ ಎನ್.ಚಿದನಂದಪ್ಪ ತಂದೆ ಲೇಟ್ ಚನ್ನಮಲ್ಲಪ್ಪ ಇವರು ದಿನಾಂಕ 13-11-2006 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕಡೇಕೊಳ್ಳ ಇವರು ನಮೂನೆ-21 ನೋಟಿಸನ್ನು ದಿನಾಂಕ 09-01-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಪಾಲು ವಿಭಾಗದ ಪತ್ರ ಈ.ಸ್ಟಾಂಪ್ ಪತ್ರ ಇರುವುದಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 37/2015-16. ದಿನಾಂಕ 10-02-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 21-06-2016 ರಿಂದ 20-09-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕಡೇಕೊಳ್ಳ ಗ್ರಾಮದ ಸನಂ 70ಎ. 71ಬಿ. 71ಡಿ. ವಿಸ್ತೀರ್ಣ 0-98. 0-72. 0-89. ಎಕ್ರೆ ಜಮೀನುಗಳು ನನ್ನ ಹಾಗೂ ನನ್ನ ದೊಡ್ಡಪ್ಪನ ಮಗನಾದ ಸಿದ್ದಲಿಂಗಪ್ಪ ಹಾಗೂ ನನ್ನ ಚಿಕ್ಕಪ್ಪನಾದ ರೇವಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ನಾವುಗಳು ದಿನಾಂಕ 13-11-2006 ರಲ್ಲಿ ಪಾಲು ವಿಭಾಗವಾಗಿದ್ದು ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಸದರಿ ಜಮೀನುಗಳು ನನ್ನ ಹಿಸ್ಸಾಕ್ಕೆ ಬಂದಿರುತ್ತವೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಜಂಟಿ ಸ್ವಾದೀನದಾರರು ಹಕ್ಕು ಬದಲಾವಣೆಗೆ ಒಪ್ಪಿದ್ದರಿಂದ ಅರ್ಜಿದಾರರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಪು.ತಿ.ನೋ-2

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 70ಎ. 71ಬಿ. 71ಡಿ. ವಿಸ್ತೀರ್ಣ 0–98. 0–72. 0–89. ಎಕ್ರೆ ಜಮೀನುಗಳನ್ನು ದಿನಾಂಕ 13–11–2006 ರ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರಾದ ಎನ್.ಚಿದಾನಂದಪ್ಪ ತಂದೆ ಲೇಟ್ ಚನ್ನಮಲ್ಲಪ್ಪ ಭೀಮಸಮುದ್ರ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎನ್.ಚಿದಾನಂದಪ್ಪ ತಂದೆ ಲೇಟ್ ಚನ್ನಮಲ್ಲಪ್ಪ ಹಾಗೂ ಇತರರು ಭೀಮಸಮುದ್ರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.